KACD420018422024

<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ</u>

<u>ನ್ಯಾಯಾಲಯ ಹೊಳಲ್ಕೆರೆ.</u>

ಸಿ.ಸಿ. ನಂಃ **1093/2024**

ಫಿರ್ಯಾದಿದಾರರುಃ ಸರ್ಕಾರದ ಪರವಾಗಿ – ಚಿಕ್ಕಜಾಜೂರು ಪೋಲೀಸ್ ಠಾಣೆ

- ವಿರುದ್ಧ -

ಆರೋಪಿ ಃ ರಂಗಸ್ವಾಮಿ ಬಿ.ಕೆ. ಬಿನ್ ಕುಬೇರಪ್ಪ ಆರ್,
ವಯಸ್ಸುಃ 26 ವರ್ಷ, ವೃತಿಃ ವ್ಯವಸಾಯ,
ಕೆಎ–16–ಈ ಈ–1532 ರ **ಬೈಕ್ ಚಾಲಕ**
ವಾಸಃ ಬಂಡೇಬೊಮ್ಮೇನಹಳ್ಳಿ ಗ್ರಾಮ,
ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

**:: ಆ ಪಾ ದ ನೆ ::**

ದಿಃ 02–05–2024 ರಂದು ಬೆಳಗ್ಗೆ ಸುಮಾರು 11–00 ರ ಸಮಯದಲ್ಲಿ ಆರೋಪಿತನಾದ ನೀನು ಕೆಎ–16–ಈ ಈ–1532 ರ ಮೋಟಾರ್ ಸೈಕಲ್ ನ ಹಿಂಬದಿಯಲ್ಲಿ ರಂಜಿತ ಕೋಂ ಪಾಂಡುರಂಗರವರನ್ನು ಕೂರಿಸಿಕೂಂಡು, ಬಂಡೇಬೊಮ್ಮೇನಹಳ್ಳಿ ಗ್ರಾಮದ ಕಡೆಯಿಂದ ದಾವಣಗೆರೆ ಕಡೆಗೆ ಅಜಾಗರೂಕತೆಯಿಂದ ಅತೀವೇಗ ಮತ್ತು ನಿರ್ಲಕ್ಷ್ಯತನದಿಂದ ಮಾನವನ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು, ಬಂಡೇಬೊಮ್ಮೇನಹಳ್ಳಿ ಗೇಟ್ ಬಳಿ ಬಾಬುರಾಜೇಂದ್ರರವರ ಜಮೀನಿನ ಹತ್ತಿರ ಎಸ್.ಹೆಚ್.47 ರಸ್ತೆಯಲ್ಲಿ ಮೃತಳಾದ ರಂಜಿತ ಕೋಂ ಕುಬೇರಪ್ಪರವರನ್ನು ಬೈಕಿನಿಂದ ಆಯತಪ್ಪಿ ಜೋಲಿಹೋಗಿ ರಸ್ತೆಯ ಮೇಲೆ ಬಿದ್ದು ಅಪಘಾತವನ್ನುಂಟು ಮಾಡಿರುತ್ತೀರಿ. ಈ ಮೂಲಕ ಆರೋಪಿತನಾದ ನೀನು ಈ ನ್ಯಾಯಾಲಯದ ಸಂಜ್ಞೆದೊಳಗೆ ಭಾಂ.ದಂ. ಸಂ. ಕಲಂ 279 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರಿ.

ಎರಡನೇಯದಾಗಿ ಈ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತನಾದ ನೀನು ಮೇಲ್ಕಂಡ ವಾಹನವನ್ನು ನಿರ್ಲಕ್ಷ್ಯತನದಿಂದ ಚಾಲನೆ ಮಾಡಿದ್ದರಿಂದ, ಮೃತ ರಂಜಿತ ಕೋಂ ಕುಬೇರಪ್ಪರವರು ಬೈಕಿನಿಂದ ಆಯತಪ್ಪಿ ಜೋಲಿಹೋಗಿ ರಸ್ತೆಯ ಮೇಲೆ ಬಿದ್ದು ರಕ್ತಗಾಯಗಳಾಗಿ, ಕಿವಿ ಮತ್ತು ಬಾಯಿಯಿಂದ ರಕ್ತ ಬಂದಿದ್ದು, ಯಾವುದೋ ಒಂದು ವಾಹನದಲ್ಲಿ ಮಾಯಕೊಂಡ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆಯ ಎಸ್ ಎಸ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಕೊಡಿಸಿಕೊಂಡು , ನಂತರ ಚಿಗಟೇರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದು, ದಿಃ 03–05–2024 ರಂದು ಸಂಜೆ 7–55 ರ ಸಮಯದಲ್ಲಿ ರಂಜಿತಾಳು ಚಿಕಿತ್ಸೆ ಫಲಕಾರಿಯಾಗದೆ

KACD420018422024

ಮೃತಪಟ್ಟಿರುತ್ತಾಳೆ. ಈ ಮೂಲಕ ಆರೋಪಿತನಾದ ನೀನು ಈ ನ್ಯಾಯಾಲಯದ ಸಂಜ್ಞೆದೊಳಗೆ ಭಾಂ.ದಂ.ಸಂ.ಕಲಂ 304(ಎ) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿರುತ್ತದೆ.

ಪ್ರಶ್ನೆ-1. ನಿಮಗೆ ಮೇಲಿನ ಆಪಾದನೆಯ ಸಾರಾಂಶ ತಿಳಿಯಿತೇ ?

ಉತ್ತರಃ -

ಪ್ರಶ್ನೆ-2. ಮೇಲಿನ ಆಪಾದನೆಯನ್ನು ಒಪ್ಪುವಿರಾ ? ಪ್ರತಿರಕ್ಷೆ ಇದೆಯಾ ?

ಉತ್ತರಃ

(ಮೇಲಿನ ಆಪಾದನೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡದಲ್ಲಿ ಓದಿ ಹೇಳಿ, ನಂತರ ಅವರು ನೀಡಿದ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು.

ದಿಃ21-10-2024

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ ಹೊಳಲ್ಕೆರೆ